ಬಿಡುತ್ತೇನೆ. 1927 ಸೆಕ್ಷನ್ 17,18 ರ ಅಡಿಯಲ್ಲಿ ನಾವು ಎನ್‌ಕ್ವೈರಿ ಮಾಡಿದ ಮೇಲೆ ಅದರಲ್ಲಿ ಯಾವುದೋ ಒಂದು ತಾರತಮ್ಯ ಇಲ್ಲದೆ ಇರತಕ್ಕಂತಹ ಪರಿಸ್ಥಿತಿಯಲ್ಲಿ ಈ ಒಂದು ಟ್ರಸ್ಟ್ ಡೀಡ್ ಪ್ರಕಾರ ನಾವು ಅವರ ದೇವರನ್ನು ಅವರಿಗೆ ಕೊಡಲೇ ಬೇಕಾಗುತ್ತದೆ. ಉದಾಹರಣೆಗೆ ಹೊರನಾಡು ಅನ್ನಪೂರ್ಣೇಶ್ವರಿ, ವರ್ಷಕ್ಕೆ 25ಲಕ್ಷ ರೂಪಾಯಿ ಆದಾಯ ಇದೆ. ಅವರು ನಮಗೆ ಸ್ಟೇಟ್‌ಮೆಂಟ್ ಕೊಡುತ್ತಾರೆ. ಜಮಾ ಖರ್ಚು ಏನಾಗುತ್ತದೆ, ಏನು ಇಲ್ಲವೆಂದು, ಅದನ್ನು ಪರಿಶೀಲಿಸಬೇಕೇ ವಿನಃ ಆ ವಂಶದವರಿಗೆ ಸೋಮ ವಂಶ ಕ್ಷತ್ರಿಯವರಿಗೆ ನಾವು ಅನ್ಯಾಯ ಮಾಡತಕ್ಕಂಥದ್ದು ಅಲ್ಲ, ಮಾಡಕೂಡದು ಎನ್ನತಕ್ಕಂಥದ್ದು ನಮ್ಮ ಕಾನೂನು ಕಟ್ಟಳೆ ಇದೆ. ಆದಕಾರಣ ನಾವು ಅವರ ದೇವರನ್ನು ಅವರಿಗೆ ಒಪ್ಪಿಸಲೇ ಬೇಕಾದಂಥ ಪರಿಸ್ಥಿತಿ ಬರುತ್ತದೆ. ಅದರಲ್ಲಿ ನಾವು ಮುಚ್ಚು ಮರೆ ಮಾಡುವ ಪ್ರಶ್ನೆ ಬರುವುದಿಲ್ಲವೆಂದು ನಾನು ಈ ಸದನದ ಮೂಲಕ ಹೇಳುತ್ತಿದ್ದೇನೆ.

ಪ್ರತಿ ಜಿಲ್ಲೆಯಲ್ಲಿ ಡಿಸ್ಟ್ರಿಕ್ಟ್ ಎನ್‌ಕ್ವೈರಿ ಅಥಾರಿಟಿ ಮಾಡುವ ಬಗ್ಗೆ

ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ನಮ್ಮ ರಾಜ್ಯದಲ್ಲಿ ಆಗಿಂದಾಗ್ಗೆ ಮಾನವ ಹಕ್ಕುಗಳ ಉಲ್ಲಂಘನೆ ಬಗ್ಗೆ ನಾವು ವರದಿಗಳನ್ನು ಓದುತ್ತಿದ್ದೇವೆ. ಅದು ಲಾಕ್ ಅಪ್ ಡೆತ್ ಇರಬಹುದು, ಲಾಕ್ ಆಫ್ ಹಿಂಸೆ ಇರಬಹುದು, ಬಂಧನಕ್ಕೊಳಗಾದಾಗ ಮಾನ ಭಂಗ ಇರಬಹುದು, ಚೈಲ್ಡ್ ಲೇಬರ್ ಇರಬಹುದು, ಬಾಂಡಡ್ ಲೇಬರ್ ಇರಬಹುದು, ಅನೇಕ ಮಾನವ ಹಕ್ಕುಗಳ ಉಲ್ಲಂಘನೆ ಪ್ರಕರಣ ಓದುತ್ತಿರುತ್ತೇವೆ. ನಾವು ಓದಿ ಆಕ್ರೋಶ ವ್ಯಕ್ತಪಡಿಸಿ ಮರೆತು ಬಿಡುತ್ತೇವೆ. 1994ನೇ ಇಸವಿಯಲ್ಲಿ ನಮ್ಮ ರಾಜ್ಯದಲ್ಲಿ 9 ಲಾಕ್ ಆಪ್ ಡೆತ್ ಆಯಿತು. 1995ರಲ್ಲಿ 3, 1996ರಲ್ಲಿ 10, 1997 ರಲ್ಲಿ 5 ಲಾಕ್ ಆಪ್ ಡೆತ್. ಪೊಲೀಸ್‌ನವರು ಸಾಮಾನ್ಯವಾಗಿ ಇದನ್ನು ನ್ಯಾಚುರಲ್ ಡೆತ್ ಇಲ್ಲ ಸುಯಿಸೈಡ್ ಎಂದು ವ್ಯಾಖ್ಯಾನ ಇಟ್ಟು ಬಿಡುತ್ತಾರೆ. 1977ರಲ್ಲಿ ನ್ಯಾಷನಲ್ ಪೋಲೀಸ್ ಕಮಿಷನರ್‌ರವರು ಈ ರೀತಿ ಆಗುತ್ತಿರುವುದಕ್ಕೆ ಪ್ರತಿ ಜಿಲ್ಲೆಯಲ್ಲಿ ಡಿಸ್ಟ್ರಿಕ್ಟ್ ಎನ್‌ಕ್ವೈರಿ ಅಥಾರಿಟಿ ಇರಬೇಕೆಂದು ಮಾಡಿದರು. ಆದರೆ ಇದುವರೆಗೆ ನಮ್ಮ ರಾಜ್ಯದಲ್ಲಿ ಆಗಿಲ್ಲ. 1993ನೇ ಇಸವಿಯಲ್ಲಿ ದ ಪ್ರೊಟೆಕ್ಷನ್ ಆಫ್ ಹ್ಯೂಮನ್ ರೈಟ್ಸ್ ಆಕ್ಟ್ ಅನ್ನುವುದು ಅನುಮೋದನೆ ಆಗಿ ಪಾಸಾಗಿ, ಅದರ ಕೆಳಗಡೆ ಸೆಂಟ್ರಲ್ ಹ್ಯೂಮನ್ ರೈಟ್ ಕಮಿಷನ್ ಆಯಿತು.

MR. SPEAKER : I have a piece of advice. ನಾಣಯ್ಯನವರು ಇವತ್ತು ಓತ್ ತೆಗೆದುಕೊಳ್ಳುವುದಕ್ಕೆ ಹೋಗಿದ್ದಾರೆ, ನಾಣಯ್ಯನವರು ಇದ್ದಾಗ ನಾಳೆ ರೈಸ್ ಮಾಡಿ ನಾನು ಅವಕಾಶ ಕೊಡುತ್ತೇನೆ. Since it is an important matter, you may get a satisfactory reply. ಬಿ.ಐ. ಪಾಟೀಲ್, ಕನ್ನಡ ಚಳುವಳಿ ನಾಯಕರು.

ಶ್ರೀ ವಾಟಾಳ್ ನಾಗರಾಜ್ : ತಾವು ಹೇಳಿದ್ದು ಕೇಳಿ ನನಗೆ ಎಷ್ಟು ಸಂತೋಷವಾಯಿತೆಂದರೆ, ಮಹಾರಾಷ್ಟ್ರ ಏಕೀಕರಣ ಸಮಿತಿಯವರನ್ನು ಕನ್ನಡ ಚಳುವಳಿ ನಾಯಕರು ಎಂದು ತಾವು ಏನು ಕರೆಯುತ್ತೀರಿ ಅದಕ್ಕಾಗಿ ತಮ್ಮನ್ನು ನಾನು ಸ್ವಾಗತ ಮಾಡುತ್ತೇನೆ. ಅವರು ಇನ್ನು ಮುಂದೆ ಗಡಿ ಸಮಸ್ಯೆ ಬಿಡಬೇಕು. ನಮ್ಮ ಜೊತೆಯಲ್ಲಿರಬೇಕು, ನಮ್ಮ ಸಂಪೂರ್ಣವಾದ ಬೆಂಬಲವನ್ನೂ ನಾವು ಅವರಿಗೆ ಕೊಡುತ್ತೇವೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವಳಾಗಿ ನಾನು ಅವರನ್ನು ಸ್ವಾಗತ ಮಾಡುತ್ತೇನೆ.

ಮಡಗಾಲ ಮತ್ತು ಇತರ ಹಳ್ಳಿಗಳಲ್ಲಿ ಗ್ಯಾಸ್ಟ್ರೋ ಎಂಟಂಟೀಸ್ ಖಾಯಿಲೆ

SRI B.I. PATIL (UCHGAON) : Sir, I would like to raise a matter about the spread of gastro-ernteritis in Madgaon and other villages of Belgaum Taluka.

ಮಾನ್ಯ ಸದಸ್ಯರು : ಅವರು ಏನು ಹೇಳುತ್ತಿದ್ದಾರೆ ನಮಗೆ ಅರ್ಥವಾಗುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್ : ತಾವು ಕನ್ನಡ ಚಳುವಳಿ ನಾಯಕರು ಎಂದು ಕರೆದಿದ್ದೀರಿ. ಒಬ್ಬರೂ ಕನ್ನಡ ಚಳುವಳಿ ನಾಯಕರು ಇಂಗ್ಲೀಷ್‌ನಲ್ಲಿ ಮಾತನಾಡಿಲ್ಲ. ಆದ್ದರಿಂದ ತಾವು ದಯವಿಟ್ಟು ಸೂಚನೆ ಕೊಡಬೇಕು.

SRI SURESH KUMAR : Even this english is tolerable than that of his Kannada.

SRI B.I. PATIL : Thank you. About fifty persons affected by gastro-eneritis have been admitted into the hospital. Three patients are in serious condition. The authorities concerned have not taken initiative to counter the attack and spread of gastro-enterities in Belgaum taluka. I want immediate action to be taken.

ಶ್ರೀ ಡಿ. ಮಂಜುನಾಥ್ (ಅರಣ್ಯ ಸಚಿವರು) : ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳನ್ನು ಇವತ್ತೇ ನಾವು ಬೆಳಗಾಂಗೆ ಕಾಂಟ್ಯಾಕ್ಟ್ ಮಾಡಿ ಅಲ್ಲಿ ಏನು ತೊಂದರೆಯಾಗಿದೆ ಅದನ್ನು ನಿವಾರಣೆ ಮಾಡಲು ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಜಿಲ್ಲಾ ಪಂಚಾಯತ್ 4ರಲ್ಲಿ ಇಂಜನಿಯರಿಂಗ್ ವಿಭಾಗದಲ್ಲಿ ಆಗಿರತಕ್ಕ ಅವ್ಯವಹಾರಗಳು

ಶ್ರೀ ಎಸ್. ಅಂಗಾರ (ಸುಳ್ಯ) : ಮಾನ್ಯ ಅಧ್ಯಕ್ಷರೆ, ಜಲ್ಲಾಪಂಚಾಯತ್ ಇಂಜಿನಿಯರ್ ಉಪ ವಿಭಾಗ 4ರಲ್ಲಿ ಕಳೆದ 4-5 ವರ್ಷಗಳಿಂದ ಸಂಬಂಧಪಟ್ಟಂತಹ ಜೂನಿಯರ್ ಇಂಜಿನಿಯರ್‌ಗಳು ತಮ್ಮ ಕಾರ್ಯವ್ಯಾಪ್ತಿಯಲ್ಲಿ ಮಾಡಿರುವಂತಹ ಕಾಮಗಾರಿಗಳಿಗೆ ಪಡೆದುಕೊಂಡಿರುವಂತಹ ಸಾಮಾನುಗಳು ಅದು ಕಬ್ಬಿಣವಿರಬಹುದು, ಸಿಮೆಂಟ್ ಇರಬಹುದು, ಅದನ್ನು ಎಂ.ಆರ್. ಪುಸ್ತಕದಲ್ಲಿ ನೊಂದಾವಣೆ ಮಾಡದೇ ಲಕ್ಷಗಟ್ಟಲೆ ಅವ್ಯವಹಾರವನ್ನು ಇಂಜಿನಿಯರ್‌ಗಳು ಅವರು ಶ್ರೀ ಗೋವರ್ಧನ್ ಜೆ.ಇ, ರಮೇಶ್ ಎ.ಇ, ಶ್ರೀ ಸುರೇಶ್ ಕೆ.ಪಿ, ಎನ್ನುವವರು ಈ ಅವ್ಯವಹಾರವನ್ನು ಮಾಡಿದ್ದಾರೆ. ಈ ಅವ್ಯವಹಾರದ ಬಗ್ಗೆ ಸಂಬಂಧಪಟ್ಟಂತಹ ಅಧಿಕಾರಿಗಳ ಮೇಲೆ ಸೂಕ್ತ ಕ್ರಮವನ್ನು ಕೈಗೊಳ್ಳಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ